**ಸಿವಿಲ್ ನ್ಯಾಯಾಧೀಶರ ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ ಔರಾದ(ಬಿ)**

**ಸಿ.ಸಿ. ನಂ. 334/2017**

**ಚಾಸಾ–10 ಪ್ರಾಸಾ–9**

ದಿನಾಂಕ 14–03–2025 ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

| | |
|---|---|
| ಹೆಸರು | ಃ ಪಂಡರಿನಾಥ |
| ತಂದೆಯ ಹೆಸರು | ಃ ದಶರಥ |
| ವಯಸ್ಸು | ಃ 71 ವರ್ಷ |
| ಉದ್ಯೋಗ | ಃ ಕೂಲಿಕೆಲಸ |
| ವಾಸ ಸ್ಥಳ | ಃ ದಾಬಕಾ–ಸಿ |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ–**

1. ಚಾಸಾ–1, 4 ರಿಂದ 9, 11 ರಿಂದ 18 ರವರ ಪರಿಚಯ ಇರುವುದಿಲ್ಲ. 1ನೇ ಆರೋಪಿಯ ಪರಿಚಯವಿದೆ. 2 ರಿಂದ 4ನೇ ಆರೋಪಿತರು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಪೋಲಿಸರು ನನ್ನನು ವಿಚಾರಣೆ ಮಾಡಿಲ್ಲ ಮತ್ತು ಯಾವುದೇ ಹೇಳಿಕೆ ಪಡೆದುಕೊಂಡಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಗೆ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಬೇಕು ಎಂದು ಕೇಳಿಕೊಂಡಿದ್ದರಿಂದ ಅನುಮತಿಸಲಾಗಿದೆ.)

**ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ–**

1. ನಾನು ದಾಬಕಾ–ಸಿ ಗ್ರಾಮ ಪಂಚಾಯತಿಯಲ್ಲಿ ಉದ್ಯೋಗ ಖಾತ್ರಿ ಯೋಜನಯಲ್ಲಿ ಕೂಲಿ ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ. ನನಗೆ ದಾಬಾಕಾ–ಸಿ ಗ್ರಾಮ ಪಂಚಾಯತಿನ ಪಿ.ಡಿ.ಓಯಾದ 2ನೇ ಆರೋಪಿತನು ತೆರೆದ ಬಾವಿ ಕೆಲಸ ಮಾಡಲು ಕೂಲಿ ನೀಡಿದ್ದು ಇರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ–6 ರಿಂದ 9, 11 ರಿಂದ 14ರವರು ಕೂಡಿ ಚಾಸಾ–5 ರವರ ಹೊಲದ ಹತ್ತಿರ ಇರುವ ನಾಲಾದಲ್ಲಿ ಬಾವಿ ಕೆಲಸ ಮಾಡಲು ಹೋಗಿದ್ದೇವು

ಎಂದರೆ ಸರಿಯಲ್ಲ. ನಾವು ಚಾಸಾ–5 ರವರ ಜಮೀನು ಸರ್ವೆ ನಂ. 14 ಕ್ಕೆ ಹತ್ತಿ ಇರುವ ನಾಲಾದಲ್ಲಿ ಕೂಲಿ ಕೆಲಸ ಮಾಡಿದ್ದೇವು ಎಂದರೆ ಸರಿಯಲ್ಲ. ಸದರಿ ಕೆಲಸ ಮಾಡಿದಕ್ಕಾಗಿ ನನ್ನ ಬ್ಯಾಂಕ ಖಾತೆಗೆ ರೂಪಾಯಿ 1750/–ಜಮಾ ಮಾಡಲಾಗಿತ್ತು ಎಂದರೆ ಸರಿಯಲ್ಲ. 2011–12 ನೇ ಸಾಲಿನಲ್ಲಿ ಎಂ.ಜಿ.ಎಲ್.ಆರ್.ಎನ್.ಜಿ ಯೋಜನೆಯಡಿಯಲ್ಲಿ ದಾಬಾಕಾ–ಸಿ ಗ್ರಾಮ ಪಂಚಾಯತಿಯಲ್ಲಿ ಬರುವ ಚಾಸಾ–5 ರವರ ಜಮೀನು ಸರ್ವೆ ನಂ. 14 ಕ್ಕೆ ಹತ್ತಿ ಇರುವ ನಾಲಾದಲ್ಲಿ ತೆರೆದ ಬಾವಿ ತೆಗೆಸಿದ್ದು, ಅದಕ್ಕೆ ರೂ.1,21,910/– ಗಳ ಕಾಮಗಾರಿ ಆಗಿತ್ತು ಎಂದರೆ ಸಾಕ್ಷಿಯು ಕಾಮಗಾರಿ ಆಗಿರುತ್ತದೆ ಆದರೆ ಎಷ್ಟು ರೂಪಾಯಿ ಖರ್ಚು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಕಾಮಗಾರಿಗೆ ರೂ.1,21,910/– ರೂಪಾಯಿ ಖರ್ಚು ಆದ ಬಗ್ಗೆ ನನಗೆ ಗೊತ್ತಿದ್ದರು ಸಹಿತ ಗೊತ್ತಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಆರೋಪಿತರೆಲ್ಲರು ಸೇರಿ ಸರ್ವೆ ನಂ.14 ರಲ್ಲಿ ಬಾವಿಯನ್ನು ತೆಗೆದೆ ಸದರಿ ಸರ್ವೆ ನಂಬರ ಪಕ್ಕದಲ್ಲಿರುವ ನಾಲಾದಲ್ಲಿ ಬಾವಿಯನ್ನು ತೆಗೆದು ಚಾಸಾ–1 ರವರಿಗೆ ಮತ್ತು ಸರಕಾರಕ್ಕೆ ಮೋಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆರೋಪಿತರು ಚಾಸಾ–1 ರವರಿಗೆ ಮತ್ತು ಸರಕಾರಕ್ಕೆ ಮೊಸ ಮಾಡಿದ್ದರೂ ಸಹಿತ ಮೋಸ ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಸಂಬಂಧ ನಾನು ದಿನಾಂಕ: 29–11–2016 ರಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. (ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ–11 ಎಂದು ಗುರುತಿಸಲಾಯಿತು).

**ಪಾಟೀ ಸವಾಲು: 1 ರಿಂದ 4 ನೇ ಆರೋಪಿತರ ಪರ ವಕೀಲರಿಂದಃ–**

(ಆರೋಪಿತರ ಪರ ವಕೀಲರು ಪಾಟೀಸವಾಲು ಇಲ್ಲವೆಂದು ಹೇಳಿರುತ್ತಾರೆ).

(ಸಾಕ್ಷಿಯು ಮರಾಠಿಯಲ್ಲಿ ಹೇಳಿದ್ದನ್ನು ಅದನ್ನು ಯಥಾವತ್ತಾಗಿ ಕನ್ನದಲ್ಲಿ ಅನುವಾದಿಸಿ ನನ್ನ ಉಕ್ತಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಗ್ಣಣಕೀಕೃತಗೊಳಿಸಲಾಯಿತು)

ಓ. ಹೆ. ಕೆ. ಸರಿ ಇದೆ.

ಪ್ರ.ದ:ನ್ಯಾ.ದಂ.ಗಳು, ಔರಾ ದ್.